ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಚಿವ ಸಂಪುಟ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ

ದಿನಾಂಕ : DATE : 07/06/2019

2ನೇ ಶನಿವಾರದಂತೆ 4ನೇ ಶನಿವಾರವೂ ಹಾಲಿಡೇ: ಮುಂದಿನ ವರ್ಷದಿಂದ ಜಾರಿ

ಸರಕಾರಿ, ಖಾಸಗಿ ಶಾಲೆ-ಕಾಲೇಜಿಗೆ ಅನ್ವಯುವಿಲ್ಲ | ಜಯಂತಿಗಳ ರಜೆ ಕಡಿತವಿಲ್ಲ

# ನೌಕರರಿಗೆ ಮತ್ತಷ್ಟು ರಜೆ

ವಿಕ ಸುದ್ದಿಲೋಕ ಬೆಂಗಳೂರು

ರಾಜ್ಯ ಸರಕಾರಿ ನೌಕರರಿಗೆ ಇನ್ನು 2ನೇ ಶನಿವಾರದ ಜತೆಗೆ ನಾಲ್ಕನೇ ಶನಿವಾರವೂ ರಜೆ ಸಿಗಲಿದೆ. ಆದರೆ, ಇದರ ಬದಲಾಗಿ 15 ಸಾಮಾನ್ಯ ರಜೆ ಸ್ಥೈಕಿ 5ಕ್ಕೆ ಕತ್ತರಿ ಹಾಕಲಾಗಿದೆ. ಇಷ್ಟಾಗಿಯೂ ಒಟ್ಟಾರೆಯಾಗಿ 7 ರಜೆಗಳು ಹೆಚ್ಚುವರಿಯಾಗಿ ಸಿಗಲಿದೆ. ಅಂದರೆ ವಾರ್ಷಿಕವಾಗಿ 90ಕ್ಕೂ ಹೆಚ್ಚು ರಜೆಗಳು ಲಭಿಸಲಿವೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಣಯ ತೆಗೆದುಕೊಳ್ಳಲಾಗಿದೆ. ಆದರೆ, ಈ ಬಾರಿಯ ರಜಾ ಕ್ಯಾಲೆಂಡರ್ ಈಗಾಗಲೇ ಪ್ರಕಟವಾಗಿರುವುದರಿಂದ ಮುಂದಿನ ವರ್ಷದಿಂದ ಹೊಸ ರಜಾ ಸೂತ್ರ ಸರಕಾರಿ ನೌಕರರಿಗೆ ಅನ್ವಯವಾಗುತ್ತದೆ ಎಂದು ಸಂಪುಟ ಸಭೆ ಬಳಿಕ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಸಚಿವ ಕೃಷ್ಣಭೈರೇಗೌಡ ತಿಳಿಸಿದರು.

"2011ರಿಂದಲೂ ಸರಕಾರಿ ನೌಕರರ ಸಿಯೋಗದಿಂದ ಒತ್ತಾಯವಿತ್ತು. ಕೇಂದ್ರ ಮತ್ತು 18 ರಾಜ್ಯಗಳಲ್ಲಿ ಜಾರಿಯಲ್ಲಿರುವಂತೆ ವಾರದಲ್ಲಿ 5 ದಿನ ಕೆಲಸ ಅಥವಾ 4ನೇ ಶನಿವಾರ ರಜೆ ನೀಡುವಂತೆ ಬೇಡಿಕೆ ಇತ್ತು. ಈ ನಿಯಮ ಜಾರಿಗೆ ತರುವುದರ ಬದಲಾಗಿ ರಾಜ್ಯ ನಾನಾ ಜಯಂತಿಗಳನ್ನು ರಜಾ ರಹಿತವಾಗಿ ಆಚರಿಸಬೇಕೆಂಬ ಬಗ್ಗೆ ಸಂಪುಟದಲ್ಲಿ ಈ ಹಿಂದೆ ಚರ್ಚೆ ನಡೆಸಲಾಗಿತ್ತು. ಆದರೆ ಇದರಿಂದ ಆಯಾ ಸಮುದಾಯದ ಭಾವನೆಗೆ ಧಕ್ಕೆ ತಂದಂತಾಗಬಹುದೆಂಬ ಕಾರಣಕ್ಕೆ ಜಯಂತಿಗಳ ರಜೆಯ ಜತೆಗೆ 4ನೇ ಶನಿವಾರ ರಜೆ ನೀಡಲು ನಿರ್ಧರಿಸಲಾಗಿದೆ," ಎಂದು ಸಚಿವರು ವಿವರಿಸಿದರು.



| ನೌಕರರ ರಜೆ | |
|---|---|
| ಸಾರ್ವತ್ರಿಕ ರಜೆ | 22 |
| ವೇತನಸಹಿತ ರಜೆ | 15 |
| ಅರ್ಧ ದಿನ ರಜೆ | 10 |
| ಗಳಿಕೆ ರಜೆ | 30 |
| ಸಾಮಾನ್ಯ ರಜೆ | 10 |
| ನಿರ್ಬಂಧಿತ ರಜೆ | 02 |
| ಪರಿಮಿತ-ಆರ್‌ಎಚ್ | 19 |

## ಶಾಲಾ-ಕಾಲೇಜುಗಳಿಗಿಲ್ಲ

4ನೇ ಶನಿವಾರ ರಜೆ ತೀರ್ಮಾನ ಶಿಕ್ಷಣ ಇಲಾಖೆಗೆ ಅನ್ವಯಿಸುತ್ತದೋ ಇಲ್ಲವೋ ಎಂಬ ಬಗ್ಗೆ ಗೊಂದಲ ಸೃಷ್ಟಿಸಿದೆ. ರಜೆ ಶಿಕ್ಷಣ ಇಲಾಖೆಗೂ ಅನ್ವಯಿಸಲಿದೆ ಎಂದು ಸಚಿವ ಕೃಷ್ಣಭೈರೇಗೌಡರು ಹೇಳಿದ್ದರು. ಮುಖ್ಯಕಾರ್ಯದರ್ಶಿ ಕಚೇರಿ ಕೂಡ ಅನುಮೋದಿಸಿತ್ತು. ಅಂತಿಮವಾಗಿ ಸಿಎಂ ಕಾರ್ಯಾಲಯ ಶಿಕ್ಷಣ ಇಲಾಖೆಗೆ ಮೌಖಿಕ ಸ್ಪಷ್ಟನೆ ನೀಡಿ '4ನೇ ಶನಿವಾರದಂದು ಸರಕಾರಿ ಶಾಲಾ ಕಾಲೇಜುಗಳಿಗೆ ರಜೆ ಇಲ್ಲ. ಶಿಕ್ಷಣ ಇಲಾಖೆಯ ಕಚೇರಿಗೆ ಮಾತ್ರ ರಜೆ' ಎಂದು ಸ್ಪಷ್ಟಪಡಿಸಿದೆ.

ಸರಕಾರದ ಈ ರಜಾ ನೀತಿಯ ಬಗ್ಗೆ ಪೊಲೀಸ್ ಇಲಾಖೆಯ ಕೆಳ ಹಂತದ ಅಧಿಕಾರಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಪೊಲೀಸರಿಗೆ ವಾರದ ರಜೆಯೂ ಸರಿಯಾಗಿ ಸಿಗುವುದಿಲ್ಲ. ಎರಡನೇ ಹಾಗೂ ನಾಲ್ಕನೇ ಶನಿವಾರದ ರಜೆ ಪಡೆಯುವುದು ಕನಸಿನ ಮಾತು ಎಂಬ ಬಗ್ಗೆ ಚರ್ಚೆಯಾಗುತ್ತಿದೆ.

## ಸಿ-ಡಿ ದರ್ಜೆ ನೌಕರರ ವರ್ಗಕ್ಕೂ ಕೌನ್ಸೆಲಿಂಗ್

ಆಡಳಿತಾತ್ಮಕ ಸುಧಾರಣೆ ದೃಷ್ಟಿಯಿಂದ ಸಿ ಹಾಗೂ ಡಿ ದರ್ಜೆ ನೌಕರರ ವರ್ಗಾವಣೆಗೆ ಶಿಕ್ಷಕರ ರೀತಿಯಲ್ಲಿ ಕೌನ್ಸೆಲಿಂಗ್ ಮಾದರಿ ಜಾರಿಗೆ ಒಪ್ಪಿಗೆ ನೀಡಿದ್ದು, ಇದಕ್ಕೆ ಪ್ರತ್ಯೇಕ ಕಾನೂನು ರಚನೆಯಾಗಲಿದೆ. ಮುಂದಿನ ವರ್ಷದಿಂದ ಕೌನ್ಸೆಲಿಂಗ್ ಮಾದರಿಯಲ್ಲಿ ನಡೆಯುವ ವರ್ಗಾವಣೆ ವ್ಯಾಪ್ತಿಯಿಂದ ಸಚಿವಾಲಯ ನೌಕರರನ್ನು ಹೊರಗಿಡಲು ನಿರ್ಧರಿಸಲಾಗಿದೆ. ಸಿ ದರ್ಜೆ ನೌಕರರಿಗೆ ನಾಲ್ಕು ವರ್ಷ, ಡಿ ದರ್ಜೆ ನೌಕರರಿಗೆ ಏಳು ವರ್ಷ ಒಂದೇ ಕಡೆ ಕೆಲಸ ಮಾಡಿದರೆ ಮಾತ್ರ ವರ್ಗಾವಣೆಗೆ ಅರ್ಹರಾಗುತ್ತಾರೆ. ಬೀದರ್, ಕಲಬುರಗಿ, ರಾಯಚೂರು, ಉತ್ತರ ಕನ್ನಡ ಸೇರಿದಂತೆ ರಾಜ್ಯದ ಕೆಲ ಜಿಲ್ಲೆಗಳಲ್ಲಿ ಸರಕಾರಿ ಹುದ್ದೆಗಳು ಕಾಯಂ ಆಗಿ ಖಾಲಿ ಇರುತ್ತವೆ. ಕೆಲವೆಡೆ ಖಾಲಿ ಹುದ್ದೆಗಿಂತ ಹೆಚ್ಚುವರಿ ಸಿಬ್ಬಂದಿ ಇರುತ್ತಾರೆ. ಹೀಗಾಗಿ ಸಮಾನ ಹಂಚಿಕೆ ಜಾರಿಗೆ ತರಲು ಈ ನೀತಿ ಜಾರಿಗೆ ತರಲಾಗುತ್ತಿದೆ ಎಂದು ಸಚಿವ ಕೃಷ್ಣ ಭೈರೇಗೌಡ ವಿವರಿಸಿದರು.

7